**ಓ.ಎಸ್. ನಂ. 287/2018 ಪಿ.ಡಬ್ಲೂ-1 ಹೆಸರು - ಸಿದ್ದಪ್ಪ**

**ಸಾಕ್ಷಿಯನ್ನು ದಿನಾಂಕಃ 09/12/2022 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ. ಆರ್.ಎನ್.ಎನ್. ಪ್ರತಿವಾದಿ ಪರ ವಕೀಲರಿಂದಃ-**

ಹೆಗ್ಗಡಹಳ್ಳಿ ಗ್ರಾಮದ ಸರ್ವೆ ನಂಬರ್ 436/1 ಬಿ ರಲ್ಲಿ ಇರುವ ಒಟ್ಟು ವಿಸ್ತೀರ್ಣ 2 ಎಕರೆ 17 ಗುಂಟೆಯಲ್ಲಿ ಕೇವಲ 2 ಎಕರೆಯಲ್ಲಿ ಆಶ್ರಯ ನಿವೇಶನಗಳನ್ನು ಸರ್ಕಾರದವರು ಹಂಚಿಕೆ ಮಾಡಿದ್ದಾರೆ. ಸದರಿ ಸರ್ವೆ ನಂಬರ್ ನಲ್ಲಿ ಉಳಿಕೆ 17 ಗುಂಟೆ ಉತ್ತರಕ್ಕೆ ಮತ್ತು ಪೂರ್ವಕ್ಕೆ ಉಳಿದುಕೊಂಡಿದೆ. ಪೂರ್ವ ಮತ್ತು ಉತ್ತರ ದಿಕ್ಕಿನಲ್ಲಿ ಎಷ್ಟು ಎಷ್ಟು ಉಳಿದುಕೊಂಡಿದೆ ನನಗೆ ಹೇಳಲು ಆಗುವುದಿಲ್ಲ. ದಾವಾ ಸ್ವತ್ತು ಸರ್ವೆ ನಂಬರ್ 436/1 ಬಿ ರ 2 ಎಕರೆ 17 ಗುಂಟೆ ಜಮೀನಿನ ಉತ್ತರ ದಿಕ್ಕಿಗೆ ಬರುತ್ತದೆ. ನನ್ನ ತಂದೆ ಅಸಲು ದಾವಾ ಸಂಖ್ಯೆ 177/1995 ರಲ್ಲಿ ಪ್ರತಿವಾದಿಯರ ವಿರುದ್ದ ದಾವೆ ಸಲ್ಲಿಸಿದಾಗ ದಾವಾ ಸ್ವತ್ತಿನ ಉತ್ತರಕ್ಕೆ ಹುಣಸೆ ಮರ ಮತ್ತು ರಸ್ತೆ ಇತ್ತು. ದಾವಾ ಸ್ವತ್ತಿನ ಉತ್ತರಕ್ಕೆ ಇದ್ದ ರಸ್ತೆಯನ್ನು ಅಗಲೀಕರಣ ಮಾಡಿ ರಾಜ್ಯ ಹೆದ್ದಾರಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ನನ್ನ ತಂದೆ ಯಾರಿಂದ ಸ್ವಾಧೀನಕ್ಕೆ ಪಡೆದಿದ್ದರು ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ವೆಂಕಟಸ್ವಾಮಿ ರವರಿಂದ ನನ್ನ ತಂದೆ ತೆಗೆದುಕೊಂಡಿರುತ್ತಾರೆ, ಆದರೆ ಯಾವ ರೀತಿ ತೆಗೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಅಕ್ರಮ ಸಕ್ರಮದಡಿಯಲ್ಲಿ ಖಾತೆ ಕೋರಿ ಸಲ್ಲಿಸಿದ್ದ ಅರ್ಜಿಯಲ್ಲಿ ಯಾರಿಗೆ ಸೇರಿದ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದೇವೆ ಎಂದು ಹೇಳಿದ್ದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯು ಸದರಿ ಅರ್ಜಿಗೆ ಏನೆಂದು ತಕರಾರು ಸಲ್ಲಿಸಿದ್ದಾರೆ ನನಗೆ ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ 177/1995 ರಲ್ಲಿ ಸ್ಥಳ ಪರಿಶೀಲನೆಗೆ ನ್ಯಾಯಾಲಯದ ನಿಯೋಗಿ ಬಂದಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನ್ಯಾಯಾಲಯದ ನಿಯೋಗಿ ತಮ್ಮ ವರದಿಯಲ್ಲಿ 3 ಗುಂಟೆ ಜಾಗ ಲೋಕೋಪಯೋಗಿ ಇಲಾಖೆಗೆ ಸೇರಿದ್ದು ಎಂದು ಬರೆದಿದ್ದಾರೆ ಎಂದರೆ ಸಾಕ್ಷಿಯು ಲೋಕೋಪಯೋಗಿ ಇಲಾಖೆಗೆ ಸೇರಿದ್ದು ಎಂದು ಬೆರದಿದ್ದಾರೆ ಆದರೆ ಸದರಿ ಸ್ವತ್ತಿನಲ್ಲಿ ನಾವುಗಳು ಸಾಕಷ್ಟು ವರ್ಷಗಳಿಂದ ಸ್ವಾಧೀನದಲ್ಲಿ ಇದ್ದೇವೆ ಎಂದು ಊರಿನವರ ಹೇಳಿಕೆಯ ಆಧಾರದ ಮೇಲೆ ಬರೆದಿದ್ದಾರೆ.

ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಎಷ್ಟು ವಿಸ್ತೀರ್ಣವನ್ನು ಒತ್ತುವರಿ ಮಾಡಿದ್ದಾರೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಪ್ರತಿವಾದಿ ಒತ್ತುವರಿ ಮಾಡಿರುವ ಜಾಗದ ಮಾಲೀಕರು PWD ಇಲಾಖೆ ಎಂದರೆ ಸರಿಯಲ್ಲ. ಪ್ರತಿವಾದಿಯ ಮನೆಯ ಉತ್ತರ ದಿಕ್ಕಿಗೆ ದಾವಾ ಸ್ವತ್ತು ಬರುತ್ತದೆ. ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಒತ್ತುವರಿ ಮಾಡಿ ಮನೆ ಕಟ್ಟಿದ್ದಾರೆ. ನನ್ನ ಜಾಗದಲ್ಲಿ ಅಕ್ರಮವಾಗಿ ಚರಂಡಿ ನಿರ್ಮಾಣ ಮಾಡುತ್ತಿದ್ದಾರೆ ಎಂದು ನೀರಾವರಿ ಇಲಾಖೆಯವರ ಮೇಲೆ ದೂರು ನೀಡಿದ್ದಾರೆ.

( ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.)

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಓ**

ಸಹಿ/-

1 **ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**